ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ
ನಂ:1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ.ಕಾಂಪೌಂಡ್,
3ನೇ ಕ್ರಾಸ್, ಮಿಷನ್‌ರಸ್ತೆ, ಬೆಂಗಳೂರು-560027

ಸಂಖ್ಯೆ: ರೇರಾ/ಆಡಳಿತ/3875/2020-21 /1233 ದಿನಾಂಕ: 24.11.2021

ಇವರಿಗೆ

ಜಿಲ್ಲಾಧಿಕಾರಿಗಳು
ಬೆಂಗಳೂರು ನಗರ ಜಿಲ್ಲೆ
ಬೆಂಗಳೂರು.

ಮಾನ್ಯರೆ,

ವಿಷಯ: ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 2016 ರ ಕಲಂ 40(1) ಅಡಿ ದಂಡ/ ಪರಿಹಾರದ ಮೊತ್ತವನ್ನು ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡುವ ಬಗ್ಗೆ.

ಉಲ್ಲೇಖ:1. ನ್ಯಾಯ ನಿರ್ಣಯಾಧಿಕಾರಿರವರ ಪ್ರಕರಣದ ತೀರ್ಪಿನ ಸಂಖ್ಯೆ: ಸಿಎಂಪಿ/ 190813/0003875 ದಿನಾಂಕ: 11.02.2020

2. ನ್ಯಾಯ ನಿರ್ಣಯಾಧಿಕಾರಿರವರ ತೀರ್ಪನ್ನು ಕಾರ್ಯಗತಗೊಳಿಸಿದ ಆದೇಶ ದಿನಾಂಕ: 08.07.2020.

3. ರೇರಾ ಪ್ರಾಧಿಕಾರದಿಂದ ಜಿಲ್ಲಾಧಿಕಾರಿಗಳಿಗೆ ಬರೆದ ಪತ್ರ ದಿನಾಂಕ : 24.07.2020

4. ರೇರಾ ಪ್ರಾಧಿಕಾರದಿಂದ ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ರವರಿಗೆ ಬರೆದ ಪತ್ರ ದಿನಾಂಕ : 14.07.2021

5. ಅಡ್ಜುಡಿಕೇಟಿಂಗ್ ಅಧಿಕಾರಿಯವರ ಪರಿಷ್ಕೃತ ಕಾರ್ಯಗತಗೊಳಿಸಿದ ಆದೇಶ ದಿನಾಂಕ: 11.10.2021

Received Personally (Ayesha Mungas) 25/11/21

****

ಭಾರತ ಸರ್ಕಾರವು ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 2016 ಅನ್ನು ಜಾರಿಗೆ ತಂದಿರುತ್ತದೆ. ಅದಕ್ಕನುಗುಣವಾಗಿ ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು 2017 ಅನ್ನು ಪ್ರಕಟಿಸಲಾಗಿದೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಈ ಕೆಳಕಂಡ ದಾಖಲಾತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದೆ:

1. ನ್ಯಾಯನಿರ್ಣಯಾಧಿಕಾರಿಯವರ ಪ್ರಕರಣದ ತೀರ್ಪಿನ ಸಂಖ್ಯೆ: ಸಿಎಂಪಿ/ 190813/0003875 ದಿನಾಂಕ: 11.02.2020
2. ನ್ಯಾಯನಿರ್ಣಯಾಧಿಕಾರಿಯವರ ತೀರ್ಪನ್ನು ಕಾರ್ಯಗತಗೊಳಿಸಿದ ಆದೇಶ ದಿನಾಂಕ: 08.07.2020.
3. ರೇರಾ ಪ್ರಾಧಿಕಾರದಿಂದ ಜಿಲ್ಲಾಧಿಕಾರಿಗಳಿಗೆ ಬರೆದ ಪತ್ರ ದಿನಾಂಕ : 24.07.2020
4. ರೇರಾ ಪ್ರಾಧಿಕಾರದಿಂದ ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ರವರಿಗೆ ಬರೆದ ಪತ್ರ ದಿನಾಂಕ : 14.07.2021
5. ನ್ಯಾಯನಿರ್ಣಯಾಧಿಕಾರಿಯವರ ಪರಿಷ್ಕೃತ ಕಾರ್ಯಗತಗೊಳಿಸಿದ ಆದೇಶ ದಿನಾಂಕ: 11.10.2021

ತಹಸೀಲ್ದಾರರವರ ಕಛೇರಿ ಬೆಂಗಳೂರು ದಕ್ಷಿಣ ತಾಲ್ಲೂಕು 25 NOV 2021

ಮೇಲ್ಕಂಡ ಪ್ರಕರಣದಲ್ಲಿ ಉಲ್ಲೇಖ-2ರ ಮಾನ್ಯ ನ್ಯಾಯನಿರ್ಣಯಾಧಿಕಾರಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ಇವರ ತೀರ್ಪಿನ್ನು ಕಾರ್ಯಗತಗೊಳಿಸಿದ ಆದೇಶ ದಿನಾಂಕ: 08.07.2020 ಮತ್ತು 11.10.2021 ರಲ್ಲಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಜಿಲ್ಲಾಧಿಕಾರಿಗಳ ಕಛೇರಿ ಬೆಂಗಳೂರು ನಗರ ಜಿಲ್ಲೆ ಸ್ವೀಕರಿಸಿದ 25 NOV 2021 DEPUTY COMMISSIONER OFFICE BANGALORE DIST. BANGALORE

ORDER Date: 08.07.2020

By acting under section 40 of the RERA Act, read with Rule 25, the amount payable of Rs. **1,84,12,214/-** which is treated as arrears of land revenue from the developer "R.J.Rishikaran Projects Pvt. Ltd.," and the same has to be recovered by sending the file to Deputy Commissioner for recovery as arrears of land revenue. The same amount shall be deposited in the office account.

ORDER Date: 11.10.2021

By acting under section 40 of the RERA Act, read with Rule 25, the amount payable of Rs. **1,15,30,055/-** which is treated as arrears of land revenue from the developer "R.J.Rishikaran Projects Pvt. Ltd.," and the same has to be recovered by sending the file to Deputy Commissioner for recovery as arrears of land revenue. The same amount shall be deposited in the office account.

The above amount has been calculated till the end of 07.10.2021

Office is hereby directed to mention in the recovery warrant.

a) As to the recovery of future interest on the amount of Rs. 1,38,54,652/- @ 10.15 % p.a. simple interest whenever it falls due from 08.10.2021 to till realization.

ಈ ಹಿನ್ನೆಲೆಯಲ್ಲಿ, ಮೇಲ್ಕಂಡ ಮಾನ್ಯ ನ್ಯಾಯನಿರ್ಣಯಾಧಿಕಾರಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಬೆಂಗಳೂರು ಇವರ ತೀರ್ಪನ್ನು ಕಾರ್ಯಗತಗೊಳಿಸಿದ ಆದೇಶದಂತೆ "" R.J.Rishikaran Projects Pvt. Ltd.," ರವರಿಂದ ದಿನಾಂಕ 08.07.2020ರಲ್ಲಿ ರೂ. **1,84,12,214/-** ಆದೇಶಿಸಿದ್ದು, ಉಲ್ಲೇಖ(3)ರಂತೆ ತಮ್ಮ ಕಛೇರಿಗೆ ಭೂಕಂದಾಯ ಬಾಕಿ ಎಂದು ವಸೂಲಾತಿಗಾಗಿ ಲಗತ್ತು ಪತ್ರ ಬರೆಯಲಾಗಿರುತ್ತದೆ. ತಮ್ಮ ಕಛೇರಿಯ ಮುಖೇನ ವಸೂಲಾತಿ ಪ್ರಕ್ರಿಯೆ ಮಧ್ಯೆ, ಅಭಿವೃದ್ಧಿದಾರರು ರೇರಾ ಮೇಲ್ಮನವಿ ನ್ಯಾಯಾಧೀಕರಣದಲ್ಲಿ ಅಪೀಲ್ ನಂ: 380/2020ರಂತೆ ಮೇಲ್ಮನವಿ ಸಲ್ಲಿಸಿದ್ದು, ರೇರಾ ಮೇಲ್ಮನವಿ ನ್ಯಾಯಾಧೀಕರಣವು (K-REAT) ಅಭಿವೃದ್ಧಿದಾರರು ಮತ್ತು ಖರೀದಿದಾರರು ಇಬ್ಬರೂ ಜಂಟಿಯಾಗಿ ದಿನಾಂಕ 22.12.2020ರಂದು Joint memorandum of compromise ಸಲ್ಲಿಸಿದಂತೆ, ರೇರಾ ಮೇಲ್ಮನವಿ ನ್ಯಾಯಾಧೀಕರಣವು ಜಂಟಿ ಮೆಮೊದಂತೆ ದಿನಾಂಕ 23.12.2020ರಂದು ರೂ.1,75,00,000/- ಗಳಿಗೆ ಆದೇಶ ಹೊರಡಿಸಿರುತ್ತದೆ. ರೇರಾ ಮೇಲ್ಮನವಿ ನ್ಯಾಯಾಧೀಕರಣದ ಜಂಟಿ ಮೆಮೊ ಆದೇಶದಂತೆ ಖರೀದಿದಾರರಾದ ಲೈಲೇಶ್‌ರವರಿಗೆ ರೂ. 55,24,000/- ಗಳು ಮತ್ತು ಅಭಿವೃದ್ದಿದಾರರಿಂದ ಆರ್.ಟಿ.ಜಿ.ಎಸ್ ಮುಖೇನ ರೂ. 30,00,000/- ಗಳಂತೆ ಒಟ್ಟು ರೂ. 85,24,000/- ಪಾವತಿಯಾಗಿರುತ್ತದೆ. ಆದರೆ, ರೇರಾ ಮೇಲ್ಮನವಿ ನ್ಯಾಯಾಧೀಕರಣದ ಆದೇಶದಂತೆ, ಅಭಿವೃದ್ಧಿದಾರರು ಪೂರ್ಣ ಹಣವನ್ನು ಪಾವತಿಸಲು ವಿಫಲರಾಗಿರುತ್ತಾರೆ. ಉಲ್ಲೇಖ-2ರಂತೆ ದಿನಾಂಕ 08.07.2020ರ ಆದೇಶದ ಮೊತ್ತ ರೂ. **1,84,12,214/-** ಗಳ ಪೈಕಿ ರೂ. 85,24,000/- ಗಳ ಬಾಕಿ ವಸೂಲಾತಿ ಬಗ್ಗೆ ತಹಶೀಲ್ದಾರ್ ಬೆಂಗಳೂರು ದಕ್ಷಿಣ ತಾಲ್ಲೂಕುರವರು ರೇರಾ ಪ್ರಾಧಿಕಾರಕ್ಕೆ ಸ್ಪಷ್ಟೀಕರಣ ಹಾಗೂ ನಿರ್ದೇಶನ ಕೋರಿ ದಿನಾಂಕ:05.04.2021ರಂದು ಬರೆದ ಪತ್ರದಂತೆ, ತಹಶೀಲ್ದಾರ್‌ರವರಿಗೆ ರೇರಾ ಮೇಲ್ಮನವಿ ನ್ಯಾಯಾಧೀಕರಣದ ಆದೇಶದ ಮೊತ್ತ 1,75,00,000/- ರೂ. ಗಳಂತೆ ಉಳಿಕೆ ರೂ. 89,76,000/-ಗಳ ವಸೂಲಾತಿ ಪ್ರಕ್ರಿಯೆ ಮುಂದುವರೆಸಲು ಪತ್ರ ಬರೆಯಲಾಗಿತ್ತು.

ಖರೀದಿದಾರರಾದ Shri Lylesh Vijay Menezes ರವರು ರೇರಾ ಪ್ರಾಧಿಕಾರದ ಮಾನ್ಯ ಅಧ್ಯಕ್ಷರಲ್ಲಿ ಹಾಗೂ ಕಾರ್ಯದರ್ಶಿಯವರಿಗೆ ವಸೂಲಾತಿ ವಿಳಂಬದ ಬಗ್ಗೆ ಮನವಿ ಸಹ ಸಲ್ಲಿಸಿರುತ್ತಾರೆ. ಸದರಿ Shri Lylesh Vijay Menezes ರವರು ನ್ಯಾಯನಿರ್ಣಯಾಧಿಕಾರಿಗಳಲ್ಲಿ ವಸೂಲಾತಿ ವಿಳಂಬದಂತೆ ಮರು Calculation of Memo ಸಲ್ಲಿಸಿರುತ್ತಾರೆ. ಅದರಂತೆ, ನ್ಯಾಯನಿರ್ಣಯಾಧಿಕಾರಿಗಳು ಉಲ್ಲೇಖ-5 ರಂತೆ ಅಭಿವೃದ್ಧಿದಾರರಿಂದ Calculation of

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ
ನಂ:1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ.ಕಾಂಪೌಂಡ್,
3ನೇ ಕ್ರಾಸ್, ಮಿಷನ್‌ರಸ್ತೆ, ಬೆಂಗಳೂರು-560027

Memo ಸಲ್ಲಿಸಿದಂತೆ, ಒಟ್ಟು ರೂ. 1,15,30,055/-ಗಳನ್ನು ಪರಿಷ್ಕೃತ ಭೂ ಕಂದಾಯ ಬಾಕಿ ಎಂದು ವಸೂಲಿ ಮಾಡುವಂತೆ ಆದೇಶಿಸಿರುತ್ತಾರೆ. ಅದರಂತೆ, ದಿನಾಂಕ 11.10.2021 ರಂತೆ ರೂ. 1,15,30,055/-ಗಳನ್ನು ವಸೂಲಿ ಮಾಡಿ ಈ ಪ್ರಾಧಿಕಾರಕ್ಕೆ ಈ ಕೆಳಕಂಡಂತೆ ಜಮಾ ಮಾಡಲು ಕೋರಲಾಗಿದೆ ಹಾಗೂ ಈ ಪತ್ರವನ್ನು RERA Web Portal (www.rera.karnataka.gov.in) ನಲ್ಲಿ ಅಪ್ ಲೋಡ್ ಮಾಡಲಾಗಿದೆ ಎಂಬ ಅಂಶವನ್ನು ಸಹ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಸದರಿ ಮೇಲ್ಕಂಡ ಮೊತ್ತವನ್ನು ರೇರಾ ಪ್ರಾಧಿಕಾರದ ಈ ಕೆಳಕಂಡ ಖಾತೆಗೆ ಜಮಾ ಮಾಡುವಂತೆ ಕೋರಿದೆ

"Chairman, RERA Karnataka, A/c No. **520101080940037,** IFSC Code: UBIN 0901440 , Union Bank of India, S.C.Road Branch, Bengaluru".

ಅಥವಾ

ಸದರಿ ಎದರುದಾರರು ಪಾವತಿಸಲು ವಿಫಲರಾದಲ್ಲಿ ಅವರ ಎಲ್ಲಾ ಚರ - ಸ್ಥಿರಾಸ್ತಿಗಳನ್ನು ಪತ್ತೆಹಚ್ಚಿ ಕರ್ನಾಟಕ ಭೂ ಕಂದಾಯ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಎಲ್ಲಾ ಕ್ರಮಗಳನ್ನು ಅನುಸರಿಸಿ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಿಯಮಾನುಸಾರ ಹರಾಜು ಪ್ರಕ್ರಿಯೆ ಕೈಗೊಂಡು ದಂಡದ ಮೊತ್ತವನ್ನು ವಸೂಲಿ ಮಾಡಿ ರೇರಾ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ಮೇಲ್ಕಂಡಂತೆ ಆದಷ್ಟು ಬೇಗ ಕ್ರಮ ವಹಿಸಿ ವರದಿ ಸಲ್ಲಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.
(ಕಾರ್ಯದರ್ಶಿಗಳಿಂದ ಅನುಮೋದಿಸಲ್ಪಟ್ಟಿದೆ)

ತಮ್ಮ ವಿಶ್ವಾಸಿ,

B. R. Madhusudh

ಅಧೀನ ಕಾರ್ಯದರ್ಶಿ (ಪ್ರ)
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ಪ್ರತಿಗಳು:-

1) ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009 1234
2) R.J. Rishikaran Projects Pvt. Ltd., Pent House, RJ Manor Apartments, No.11/A, 80 Feet Road, Bengaluru-560034
3) Lylesh Vijay Menezes, Flat No.205, Silicon Towers, 4th 'A' Cross, Byrasandra Main Road, CV Raman Nagar, Bengaluru-560093

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ
ನಂ:1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ.ಕಾಂಪೌಂಡ್,
3ನೇ ಕ್ರಾಸ್, ಮಿಷನ್‌ರಸ್ತೆ, ಬೆಂಗಳೂರು-560027

ಸಂಖ್ಯೆ: ರೇರಾ/ಆಡಳಿತ/3875/2020-21 ದಿನಾಂಕ: 24.11.2021

ನ್ಯಾಯ ನಿರ್ಣಯಾಧಿಕಾರಿ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ಇವರ ಮುಂದೆ ದಾಖಲಾಗಿರುವ ಫಿರ್ಯಾದು ಸಂಖ್ಯೆ: ಸಿಎಂಪಿ/190813/0003875 ದಿನಾಂಕ: 11.02.2020 ಮತ್ತು ದಿನಾಂಕ: 08.07.2020 ರ ಆದೇಶ ಮತ್ತು ದಿನಾಂಕ 11.10.2021ರ ಪರಿಷ್ಕೃತ ಆದೇಶದಂತೆ:

ಬಾಕಿ ವಸೂಲಾತಿ ಪ್ರಮಾಣ ಪತ್ರ

ಫಿರ್ಯಾದುದಾರರು		ಪ್ರತಿವಾದಿಗಳು
Mr. Lylesh Vijay Menezes Flat No.205, Silicon Towers, 4th 'A' Cross, Byrasandra Main Road, CV Raman Nagar, Bengaluru-560093	ವಿರುದ್ಧ	R.J. Rishikaran Projects Pvt. Ltd., Pent House, RJ Manor Apartments, No.11/A, 80 Feet Road, Bengaluru-560034

ಮೇಲ್ಕಂಡ ಪ್ರಕರಣದಲ್ಲಿ ಪ್ರತಿವಾದಿಯಿಂದ ಫಿರ್ಯಾದುದಾರರಿಗೆ ದಿನಾಂಕ 11.10.2021ರ ಪರಿಷ್ಕೃತ ಆದೇಶದಂತೆ ಪಾವತಿಸಬೇಕಾಗಿರುವ ರೂ. 1,15,30,055/- (ರೂಪಾಯಿ ಒಂದು ಕೋಟಿ ಹದಿನೈದು ಲಕ್ಷದ ಮುವತ್ತು ಸಾವಿರದ ಐವತ್ತೈದು ಮಾತ್ರ) ಗಳನ್ನು ದಿನಾಂಕ 07.10.2021 ರವರೆಗೆ ಲೆಕ್ಕಾಚಾರ ಮಾಡಿದ್ದು, ಸದರಿ ಮೊತ್ತದ ಜೊತೆಗೆ, ಹಣ ಪಾವತಿ ಮಾಡುವವರೆಗೆ ದಿನಾಂಕ 08.10.2021 ರಿಂದ ರೂ. 1,38,54,652/- ಗಳಿಗೆ ವಾರ್ಷಿಕ ಸರಳ ಬಡ್ಡಿ ಶೇಕಡ 10.15 ರಂತೆ ಲೆಕ್ಕಾಚಾರ ಮಾಡಿ ಭೂಕಂದಾಯ ಬಾಕಿ ಎಂದು ಪ್ರತಿವಾದಿಯಿಂದ ವಸೂಲು ಮಾಡುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ (ಆದೇಶದ ಪ್ರತಿ ಲಗತ್ತಿಸಿದೆ)

ಸದರಿ ಮೇಲ್ಕಂಡ ಮೊತ್ತವನ್ನು ರೇರಾ ಪ್ರಾಧಿಕಾರದ ಈ ಕೆಳಕಂಡ ಖಾತೆಗೆ ಜಮಾ ಮಾಡುವಂತೆ ಕೋರಿದೆ

"Chairman, RERA Karnataka, A/c No. **520101080940037,** IFSC Code: UBIN 0901440 , Union Bank of India, S.C.Road Branch, Bengaluru".

ಅಥವಾ

ಸದರಿ ಎದುರುದಾರರು ದಂಡದ ಮೊತ್ತ ಪಾವತಿಸಲು ವಿಫಲರಾದಲ್ಲಿ ಅಭಿವೃದ್ಧಿದಾರರ ಇತರೆ ಎಲ್ಲಾ ಚರ – ಸ್ಥಿರಾಸ್ತಿಗಳನ್ನು ಪತ್ತೆಹಚ್ಚಿ ಕರ್ನಾಟಕ ಭೂ ಕಂದಾಯ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಎಲ್ಲಾ ಕಾರ್ಯವಿಧಾನ ಅನುಸರಿಸಿ "ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ"ದ ಹೆಸರಿಗೆ ಮುಟ್ಟುಗೋಲು ಹಾಕಿಕೊಂಡು ನಿಯಮಾನುಸಾರ ಹರಾಜು ಪ್ರಕ್ರಿಯೆ ಕೈಗೊಂಡು ದಂಡದ ಮೊತ್ತವನ್ನು ವಸೂಲಿ ಮಾಡಿ ರೇರಾ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

B.R. Madhusudhan
ಅಧೀನ ಕಾರ್ಯದರ್ಶಿ(ತ್ರಿ)
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ನಂ:1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ.ಕಾಂಪೌಂಡ್,
3ನೇ ಕ್ರಾಸ್, ಮಿಷನ್‌ರಸ್ತೆ, ಬೆಂಗಳೂರು-560027

ಕಾರ್ಯದರ್ಶಿಗಳು, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಬೆಂಗಳೂರು ಇವರು ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರಿಗೆ ಭೂ ಕಂದಾಯ ಬಾಕಿಯಂತೆ ವಸೂಲಾತಿ ಮಾಡಲು ಕಳುಹಿಸಿರುವ ವಸೂಲಾತಿ ಪ್ರಕರಣದ ತಪಶೀಲು ಪಟ್ಟಿ (ಚೆಕ್ ಲಿಸ್ಟ್)

ಸಂಖ್ಯೆ: ರೇರಾ/ಆಡಳಿತ/3875/2020-21 ದಿನಾಂಕ:

1	ಪ್ರಸ್ತುತ ಪ್ರಕರಣದಲ್ಲಿ ಪ್ರಸ್ತಾಪಿಸಿರುವ ಮೊಬಲಗನ್ನು ವಸೂಲಾತಿ ಮಾಡಲು ಇಲಾಖೆಯ ವತಿಯಿಂದ ಕಾನೂನು ರೀತ್ಯ ಎಲ್ಲಾ ವಿಧಿವಿಧಾನಗಳನ್ನು ಅನುಸರಿಸಲಾಗಿದೆಯೇ?	ಅನುಸರಿಸಲಾಗಿದೆ
2	ಪ್ರತಿಯೊಂದು ಬಾಕಿದಾರರ ಸಂಸ್ಥೆಯ ಪ್ರಕರಣಕ್ಕೂ ಮುಖಪತ್ರ (ಕವರಿಂಗ್ ಲೆಟರ್) ಹಾಕಲಾಗಿದೆಯೇ?	ಮುಖಪತ್ರ ಹಾಕಲಾಗಿದೆ
3	ವಸೂಲಾತಿ ಪತ್ರ ಕಳುಹಿಸಲಾಗಿದೆಯೇ?	ಹೌದು
4	ವಸೂಲಾತಿ ಪತ್ರಕ್ಕೆ ಸಮರ್ಥ/ ಸಕ್ಷಮ ಪ್ರಾಧಿಕಾರದ ಅಧಿಕಾರಿಯಿಂದ ದೃಢೀಕರಿಸಲಾಗಿದೆಯೇ?	ದೃಢೀಕರಿಸಿದೆ
5	ಪ್ರಸ್ತುತ ಪ್ರಕರಣದ ವಸೂಲಿ ಕ್ರಮಕ್ಕೆ ಸಂಬಂಧಿಸಿದಂತೆ ಬೇರೆ ಯಾವುದಾದರೂ ಕಡೆ ನ್ಯಾಯಾಲಯದಲ್ಲಿ ಪ್ಯಾರಲಲ್ ಪ್ರೊಸೀಡಿಂಗ್ಸ್ ನಡೆಯುತ್ತಿದೆಯೇ ಅಥವಾ ಈ ಹಿಂದೆ ನಡೆದಿದ್ದ ಪಕ್ಷದಲ್ಲಿ ನ್ಯಾಯಾಲಯದ ತೀರ್ಪಿನ ಪ್ರತಿ ಲಗತ್ತಿಸುವುದು.	ಇಲ್ಲ
6	ವಸೂಲಾತಿ ಪತ್ರದಲ್ಲಿ ಬಾಕಿದಾರರ ಸಂಸ್ಥೆಯ ಪೂರ್ಣ ವಿಳಾಸವನ್ನು ನಮೂದಿಸಲಾಗಿದೆಯೇ?	ನಮೂದಿಸಿದೆ
7	ಬಾಕಿದಾರಿನಿಂದ ಇಲಾಖೆಗೆ ಬರಬೇಕಾಗಿರುವ ಬಾಕಿಯು ಯಾವ ವರ್ಷಕ್ಕೆ ಸಂಬಂಧಪಟ್ಟಿದ್ದು?	2021
8	ಪ್ರಸ್ತುತ ಪ್ರಕರಣದಲ್ಲಿ ನಮೂದಿಸಿರುವ ಸಂಸ್ಥೆ/ಬಾಕಿದಾರರು ಹಾಲಿ ಅಸ್ತಿತ್ವದಲ್ಲಿದೆಯೇ? ಹಾಗೂ ಸ್ಥಳದಲ್ಲಿ ವಾಸವಾಗಿದ್ದಾರೆಯೇ? ಕ್ರಮವಾಗಿ	ಅಸ್ತಿತ್ವದಲ್ಲಿದೆ
9	ಪ್ರಸ್ತುತ ಪ್ರಕರಣದಲ್ಲಿ ನಿಮ್ಮ ಇಲಾಖೆಯ ವತಿಯಿಂದ ಸದರಿ ಬಾಕಿದಾರರಿಗೆ ಏನಾದರೂ ಕಂತುಗಳನ್ನು ನಿಗದಿಪಡಿಸಲಾಗಿದೆಯೇ?	ಇಲ್ಲ
10	ವಸೂಲಿ ಮಾಡಿದ ಮೊಬಲಗನ್ನು ನಿಮ್ಮ ಇಲಾಖೆಗೆ ಡಿ.ಡಿ ಮೂಲಕ ಕಳುಹಿಸಿದಲ್ಲಿ ಡಿ.ಡಿ ಕಮಿಷನ್ ಹಣವನ್ನು ವಸೂಲಿ ಮಾಡಿದ ಹಣದಲ್ಲಿಯೇ ಭರಿಸಬೇಕೋ ಅಥವಾ ಬಾಕಿದಾರರಿಂದ ಭರಿಸಬೇಕೋ?	ಬಾಕಿದಾರರಿಂದ ಪಡೆದು ಭರಿಸಬೇಕು
11	ವಸೂಲಿ ಮಾಡಿದ ಮೊಬಲಗನ್ನು ಸರ್ಕಾರದ ಖಜಾನೆಗೆ ಜಮಾ ಮಾಡಿಸುವ ಅವಕಾಶವಿದ್ದರೆ ಹೆಡ್ ಆಫ್ ಅಕೌಂಟನ್ನು ನಮೂದಿಸಲಾಗಿದೆಯೇ?	ರೇರಾ ಪ್ರಾಧಿಕಾರದ ಬ್ಯಾಂಕ್ ಖಾತೆಗೆ ಜಮಾ ಮಾಡಲು ಖಾತೆ ಸಂಖ್ಯೆ ನಮೂದಿಸಲಾಗಿದೆ
12	ಒಂದು ವೇಳೆ ಕಾರ್ಯಾಲಯದಿಂದ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ಗೆ ವಸೂಲಿಗೆ ಕಳುಹಿಸಿದ ಪ್ರಕರಣಗಳಲ್ಲಿ ಆ ದಿನಾಂಕದಿಂದ ಹಿಡಿದು ಎರಡು ತಿಂಗಳೊಳಗೆ ತಹಶೀಲ್ದಾರ್ ರವರಿಗೆ ಸಹಕಾರ ನೀಡಿ ಸಂಪೂರ್ಣ ವಸೂಲಿ ಮಾಡಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುತ್ತದೆಯೇ?	ಯಾವುದೇ ಮಾಹಿತಿ ಕೋರಿದಲ್ಲಿ ಸಹಕರಿಸಲಾಗುವುದು.
13	ಪ್ರಸ್ತುತ ಪ್ರಕರಣದಲ್ಲಿ ತಾವು ತಿಳಿಸಿರುವ ಒಟ್ಟು ಮೊಬಲಗನ್ನು ಮಾತ್ರ ವಸೂಲು ಮಾಡಬೇಕೆ? ಅಥವಾ ಬಡ್ಡಿ ಸೇರಿಸಿ ವಸೂಲು ಮಾಡಬೇಕೆ? ಬಡ್ಡಿಯದರ ಹಾಗೂ ಯಾವ ದಿನಾಂಕದಿಂದ ಲೆಕ್ಕ ಹಾಕಬೇಕೆಂಬುದರ ವಿವರ ನೀಡಿ	ಒಟ್ಟು ಬಾಕಿ ಮೊತ್ತ ರೂ. **1,15,30,055/-** ಗಳನ್ನು ದಿನಾಂಕ 07.10.2021ರವರೆಗೆ ಲೆಕ್ಕಾಚಾರ ಮಡಿದ್ದು, ಸದರಿ ಹಣವನ್ನು ಸಂಪೂರ್ಣವಾಗಿ ವಸೂಲಿ ಮಾಡುವವರೆಗೆ ದಿನಾಂಕ: 08.10.2021 ರಿಂದ ರೂ: 1,38,54,652/- ಗಳಿಗೆ ವಾರ್ಷಿಕ 10.15% ರಂತೆ ಸರಳ ಬಡ್ಡಿ ಲೆಕ್ಕಾಚಾರ ಮಾಡಿ ವಸೂಲಿ ಮಾಡುವುದು.

B. R. Madhusudan

ಅಧೀನ ಕಾರ್ಯದರ್ಶಿ (ಕ್ರೈ)
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ